ಓ ಎಸ್ ನಂಬರ 177/2016
ಪಿ. ಡಬ್ಲ್ಯೂ -1

**ದಿನಾಂಕ: 06.11.2025.**
**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**
**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಎಸ್ ಎಸ್ ಎ ವಕೀಲರಿಂದ:**

ನನ್ನ ಪೂರ್ಣ ಹೆಸರು ಬಲದೇವಸಿಂಗ್ ಕೇಶರಸಿಂಗ್ ರಜಪೂತ. ನಾನು 10 ನೇ ತರಗತಿವರೆಗೆ ವ್ಯಾಸಂಗ ಮಾಡಿರುತ್ತೇನೆ. ನಾನು ದಾವೆಯನ್ನು ಪ್ರತಾಪಸಿಂಗ್ ರಜಪೂತ ಮೇಲೆ ದಾವಾ ಆಸ್ತಿಯನ್ನು ನಮಗೆ ಬಿಟ್ಟುಕೊಡುವಂತೆ ಸಲ್ಲಿಸಿರುತ್ತೇನೆ. ದಾವೆಯನ್ನು ಮೂಲತಃ ಕೇಶರಸಿಂಗ್ ರವರು ಸಲ್ಲಿಸಿದ್ದರು ಎಂದರೆ ಸರಿ. ನಾನು ದಾವೆಯಲ್ಲಿ ಬಂದ ಬಳಿಕ ಕೇಶರಸಿಂಗ್ ರವರು ಯಾವ ದಾಖಲೆಗಳನ್ನು ಸಲ್ಲಿಸಿರುತ್ತಾರೆ ಎಂದು ನಾನು ನೋಡಿರುವುದಿಲ್ಲ. ವಾದ ಪತ್ರದಲ್ಲಿ ಬರೆದಿರುವ ಅಂಶಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ನಾನು ದಾವೆಯಲ್ಲಿ ಬಂದ ಬಳಿಕ ಯಾವುದೇ ತಿದ್ದುಪಡಿ ಮಾಡಿಕೊಂಡಿಲ್ಲ. ನನ್ನ ನೈಸರ್ಗಿಕ ತಂದೆ ಗುಲಾಬಸಿಂಗ್ ರಜಪೂತ ಎಂದರೆ ಸರಿ. ಗುಲಾಬಸಿಂಗ್, ನನ್ನ ತಾಯಿ ಶಕುಂತಲಾ ಆಜಾದಗಲ್ಲಿ ಬೆಳಗಾವಿಯಲ್ಲಿ ವಾಸಿಸುತ್ತಿದ್ದೆವು. ನನ್ನ ಶಾಲಾ ಖರ್ಚುವೆಚ್ಚಗಳನ್ನು ಗುಲಾಬಸಿಂಗ್ ಹಾಗೂ ಶಕುಂತಲಾ ರವರು ನೋಡಿಕೊಂಡಿರುತ್ತಾರೆ ಎಂದರೆ ಸರಿ.

2. ಕೇಶರಸಿಂಗ್ ರವರು ಮೊದಲು ಸೇನೆಯಲ್ಲಿ ಸೇವೆ ಸಲ್ಲಿಸುತ್ತಿದ್ದರು ಎಂದರೆ ಸರಿ. ಅವರು ನಿವೃತ್ತಿ ಹೊಂದಿದ ಬಳಿಕ ಶಿವಾಜಿನಗರ ಬೆಳಗಾವಿಯಲ್ಲಿ ವಾಸಿಸುತ್ತಿದ್ದರು ಎಂದರೆ ಸರಿ. ಅಲ್ಲಿ ಅವರು, ಅವರ ಪತ್ನಿ ಹಾಗೂ ದತ್ತಕ ಪುತ್ರನಾದ ನಾನು ವಾಸವಿರುತ್ತಿದ್ದೇವು. ಅವರಿಗೆ ಯಾವುದೇ ಮಕ್ಕಳು ಇರದೇ ಇದ್ದ ಕಾರಣ, ನಾನು ಹೆಚ್ಚಾಗಿ ಅವರ ಮನೆಯಲ್ಲಿಯೇ ವಾಸವಿರುತ್ತಿದ್ದೇನು. ಸದರಿ ವಿಷಯವನ್ನು ಸಾಬಿತುಪಡಿಸಲು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ನಾನು 37 ವರ್ಷದವನಿದ್ದಾಗ ನನ್ನನ್ನು ದತ್ತಕ ತೆಗೆದುಕೊಂಡಿರುತ್ತಾರೆ. ಅದಕ್ಕೂ ಮೊದಲು ದತ್ತಕ ಪಡೆದುಕೊಂಡಿರುವುದಿಲ್ಲ. ದತ್ತಕ ತೆಗೆದುಕೊಳ್ಳುವ ಕಾಲಕ್ಕೆ ನನಗೆ ತಿಳುವಳಿಕೆ ಇತ್ತು ಎಂದರೆ ಸರಿ. ದತ್ತಕ ತೆಗೆದುಕೊಳ್ಳುವಾಗ ಎಲ್ಲ ಹಿರಿಯರ ಸಮಕ್ಷಮ ತೆಗೆದುಕೊಂಡಿರುತ್ತಾರೆ, ಯಾವುದೇ ಕಾರ್ಯಕ್ರಮ ಆಗಿರುವುದಿಲ್ಲ. 2009ನೇ ಸಾಲಿನಲ್ಲಿ ದತ್ತಕ ತೆಗೆದುಕೊಂಡಿರುತ್ತಾರೆ, ನಿಖರವಾಗಿ ದಿನಾಂಕ ನೆನಪಿರುವುದಿಲ್ಲ. ಕೇಶರಸಿಂಗ ರವರ ಶಿವಾಜಿನಗರ ಮನೆಯಲ್ಲಿ ದತ್ತಕ ತೆಗೆದುಕೊಂಡಿರುತ್ತಾರೆ.

3. ದತ್ತಕ ತೆಗೆದುಕೊಳ್ಳುವ ಕಾಲಕ್ಕೆ ಯಾರು ಯಾರು ಹಾಜರಿದ್ದರು ಅವರ ಹೆಸರು ಹೇಳಲಾಗುವುದಿಲ್ಲ. ಗುಲಾಬಸಿಂಗ್ ರವರು 2007 ರಲ್ಲಿ ಮೃತಹೊಂದಿರುತ್ತಾರೆ. ದತ್ತಕ ಪಡೆದುಕೊಂಡ ನಂತರ ನನ್ನ ಹೆಸರನ್ನು ಬದಲಾಯಿಸಿಕೊಂಡಿರುತ್ತೇನೆ. ದತ್ತಕ ಪತ್ರದಲ್ಲಿಯೇ ನನ್ನ ಹೆಸರನ್ನು ಬದಲಾಯಿಸಿಕೊಂಡಿರುತ್ತೇನೆ, ಬೇರೆ ಯಾವುದೇ ದಾಖಲೆಗಳನ್ನು ಮಾಡಿಕೊಂಡಿರುವುದಿಲ್ಲ.

4. ಶಾಲಾ ದಾಖಲಾತಿಗಳಲ್ಲಿ, ನನ್ನ ಹೆಸರು ಬಲದೇವಸಿಂಗ್ ಗುಲಬಸಿಂಗ್ ರಜಪೂತ ಎಂದು ಇರುತ್ತದೆ ಎಂದರೆ ಸರಿ. ಆಧಾರ ಕಾರ್ಡ, ಚುನಾವಣಾ ಗುರುತಿನ ಚೀಟಿ ಹಾಗೂ ಕುಟುಂಬ ಪಡಿತರ ಚೀಟಿಯಲ್ಲಿ ನನ್ನ ಹೆಸರು ಬಲದೇವಸಿಂಗ್ ಕೇಶರಸಿಂಗ್ ರಜಪೂತ ಎಂದು ಇರುತ್ತದೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ.

5. ನಮ್ಮ ಮನೆಯಲ್ಲಿ, ಸಮಾಜದಲ್ಲಿ ನನ್ನನ್ನು ಬಲದೇವಸಿಂಗ್ ಗುಲಬಸಿಂಗ್ ರಜಪೂತ ಎಂದೇ ಗುರುತಿಸುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಬಲದೇವಸಿಂಗ್ ಕೇಶರಸಿಂಗ್ ರಜಪೂತ ಎಂದು ಗುರುತಿಸುತ್ತಾರೆ ಎಂದು ನುಡಿಯುತ್ತಾರೆ. ಈ ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದತ್ತಕ ಪತ್ರವನ್ನು ಉಪನೊಂದಣಾಧಿಕಾರಿಯವರ ಕಚೇರಿ ಬೆಳಗಾವಿಯಲ್ಲಿ ನನ್ನ ಸಮಕ್ಷಮ ಬರೆದಿರುತ್ತಾರೆ. ಸದರಿ ಪತ್ರವನ್ನು ಬರೆಯುವ ಕಾಲಕ್ಕೆ ಸುಭಾಷ ಪಾಟೀಲ ಹಾಗೂ ಸಂಗೊಳ್ಳಿ ಎಂಬುವವರು ಹಾಜರಿದ್ದರು. ಸದರಿಯವರನ್ನು ಹೊರತುಪಡಿಸಿ ಬೇರೆ ಯಾರು ಇರಲಿಲ್ಲ. ದತ್ತಕ ಪತ್ರವನ್ನು ಬರೆಯಲು ಸ್ಟ್ಯಾಂಪ ಪೇಪರನ್ನು ಯಾರು ಮತ್ತು ಯಾವಾಗ ತಂದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಪತ್ರವನ್ನು ಯಾರು ಬರೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ದತ್ತಕ ಪತ್ರದಲ್ಲಿ ನನ್ನನ್ನು ದತ್ತಕಕ್ಕೆ ನೀಡುತ್ತಿದ್ದುದರ ಬರೆ ಬರೆದಿರುತ್ತಾರೆ. ಬೇರೆ ಯಾವ ಎಲ್ಲಾ ವಿಷಯಗಳನ್ನು ಬರೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಯಾವಾಗ ಕಳೆದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ.

6. ಪತ್ರವನ್ನು ಎಷ್ಟು ಗಂಟೆಗೆ ಬರೆಯಲು ಪ್ರಾರಂಭಸಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಪತ್ರವನ್ನು ಎಷ್ಟು ಗಂಟೆಗೆ ನೊಂದಣಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಮೂಲ ದತ್ತಕ ಪತ್ರ ಕಳೆದುಹೋಗಿರುತ್ತದೆ. ಕೇಶರಸಿಂಗ್ ರವರು ಮೃತ ಹೊಂದಿದ ಬಳಿಕ ದಾಖಲೆಯನ್ನು ಹುಡುಕುವ ಕಾಲಕ್ಕೆ ತಿಳಿದುಬಂದಿರುತ್ತದೆ. ಸದರಿ ಪತ್ರ ಕಳೆದ ಬಗ್ಗೆ ದೂರನ್ನು ದಾಖಲಿಸಿರುವುದಿಲ್ಲ. ವಾದ ಪತ್ರದಲ್ಲಿ ದತ್ತಕ ಪತ್ರ ಕಳೆದುಹೊದ ಬಗ್ಗೆ ನಮೂದಿಸಲು ಯಾವುದೇ ತೊಂದರೆ ಇರಲಿಲ್ಲ. ಮೂಲ ದತ್ತಕ ಪತ್ರ

ಕಳೆದುಹೋಗಿರುವುದರಿಂದ ದೃಡಿಕೃತ ನಕಲನ್ನು ನ್ಯಾಯಾಲಯಕ್ಕೆ ಸಲ್ಲಿಸುವ ಕಾಲಕ್ಕೆ ಅನುಮತಿಯನ್ನು ಪಡೆದುಕೊಳ್ಳಲು ಯಾವುದೇ ತೊಂದರೆ ಇರಲಿಲ್ಲ. ಮೂಲ ದತ್ತಕ ಪತ್ರ ಖೊಟ್ಟಿಯಾಗಿರುವುದರಿಂದ ಅದನ್ನು ಹಾಜರುಪಡಿಸಿದಲ್ಲಿ ತಿಳಿದುಬರುತ್ತದೆ ಎಂಬ ದುರುದ್ದೇಶದಿಂದ ಅದನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಕೇಶರಸಿಂಗ್ ರಜಪೂತ ರವರು ಹಾಗೂ ಪ್ರೇಮಲತಾ ರಜಪೂತ ರವರು ದತ್ತಕ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿಯವರು ದತ್ತಕ ಪತ್ರದಲ್ಲಿ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದತ್ತಕ ಪಡೆದುಕೊಳ್ಳುವ ಕಾಲಕ್ಕೆ ಹಿಂದು ಧರ್ಮದ ಅವಶ್ಯಕ ವಿಧಿವಿಧಾನಗಳನ್ನು ನೀವು ಪಾಲಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಕೇಶರಸಿಂಗ್ ರಜಪೂತ ರವರ ಪಿಂಚಣಿ ಹಾಗೂ ಅವರ ಬ್ಯಾಂಕನಲ್ಲಿರುವ ಹಣವನ್ನು ಪಡೆದುಕೊಳ್ಳುವ ದುರುದ್ದೇಶದಿಂದ ಖೊಟ್ಟಿ ದತ್ತಕ ಪತ್ರವನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

7. ಸಮಾಜದಲ್ಲಿ ಎಂದಿಗೂ ನಾನು ಕೇಶರಸಿಂಗ್ ರವರ ದತ್ತಕ ಪುತ್ರನೆಂದು ಗುರುತಿಸಿಕೊಳ್ಳದೇ ಇದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲುಃ ಸಮಯ ಕೋರಿದ ಕಾರಣ ಮುಂದೂಡಲಾಯಿತು.**

ಮರುವಿಚಾರಣೆ ಇರುವುದಿಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಪ್ರ.ದಿ.ನ್ಯಾ. ಮತ್ತು ಪ್ರ.ದ.ನ್ಯಾ. ದಂ. ನ್ಯಾ. ಬೈಲಹೊಂಗಲ